# ನಗರದಲ್ಲಿರುವ ವಿಭಾರವರ ಮನೆ ಸಂಪೂರ್ಣ ಸೌರಶಕ್ತಿಯಿಂದ ಕೂಡಿದ ಮನೆ

ಶಿವಮೊಗ್ಗ 16-6-2012



ಶಿವಮೊಗ್ಗ: ಇಲ್ಲಿನ ಲಾಲ್ ಬಹಾದೂರ್ ಶಾಸ್ತ್ರೀ ನಗರದಲ್ಲಿನ ವಿಭಾ ಎಂಬ ಮನೆಯು ಸಂಪೂರ್ಣ ಸೌರ ಶಕ್ತಿಯಿಂದ ನಡೆಯುತ್ತಿದೆ. ಈ ಕುರಿತು ಮನೆಯ ಮಾಲೀಕರಾದ ಪ್ರೊ.ಶ್ರೀಪತಿ ಎಲ್.ಕೆ. ಯವರ ಬಹಳ ಕಾಲದ ಕನಸು ನನಸಾದಂತಾಗಿದೆ. ಅವರು ಪರ್ಯಾಯ ಇಂಧನದ ಈ ಕುರಿತು ಅವರು ಮಾತ ಹೇಳುವುದು ಅಷ್ಟೇ ಅಲ್ಲ, ಸ್ವತಃ ತಾವೇ ಅನುಷ್ಠಾನಕ್ಕೆ ತರುವಲ್ಲಿ ಯಶಸ್ಸು ಗಳಿಸಿದ್ದಾರೆ. ಅವರ ಈ ಕನಸು ಸಾಕಾರಗೊಳ್ಳಲು ಕಾರಣರಾದ 'ವಶು ಕರ್ನಾಟಕದ ಕ್ರೆಡೆಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಕುಮಾರ್.

ಅವರು ಇಂದು ಪ್ರೊ.ಶ್ರೀಪತಿ ಅವರ ಮನೆಯಲ್ಲಿ ಈ ಸೌರಘಟಕಕ್ಕೆ ಚಾಲನೆ ನೀಡಿ ಮಾತನಾಡಿ ಈ ರೀತಿಯ ಯೋಜನೆಗಳಿಗೆ ಅತ್ಯಂತ ಕ್ಷಿಪ್ರವಾಗಿ ಸ್ಪಂದಿಸಿದ್ದಲ್ಲದೇ, ರಾಜ್ಯಕ್ಕೆ ಮಾದರಿಯಾಗುವ ಈ ಯೋಜನೆಯನ್ನು ಪ್ರೋತ್ಸಾಹಿಸಲಾಗುವುದು. ಸಂಸ್ಥೆ ಆದ್ಯತೆಯ ಮೇಲೆ ಸೌಲಭ್ಯ ವಿಸ್ತರಿಸಲು ಬದ್ಧವಾಗಿದೆ. ಹಾಗೂ ಹಾರದ ಶೀಕವಾಗಿ ತಮ್ಮ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಇದನ್ನು ಕಾರ್ಯಗತಗೊಳಿಸಿದ ಜಗತ್ತಿನ ಹೆಸರಾಂತ ಸೋಲಾರ್ ಸಂಸ್ಥೆ-ಸೆಲ್ಕೋ ಸಂಸ್ಥೆಯ ಸಂಸ್ಥಾಪಕ ಡಾ. ಹರೀಶ್ ಹಂದೆ ಮಾತನಾಡಿ ದೇಶದ ವಿದ್ಯುತ್ ಕೊರತೆ ನೀಗಿಸುವಲ್ಲಿ ಸೌರಶಕ್ತಿ ಬಳಕೆ ಅವಶ್ಯವಾಗಿದೆ. ಸರ್ಕಾರಗಳು ಸೌರ ಉತ್ಪನ್ನಗಳಿಗೆ ತೆರಿಗೆ ವಿನಾಯಿತಿ ನೀಡಿದರೆ, ಗ್ರಾಹಕರಿಗೆ ಹೆಚ್ಚು ಅನುಕೂಲ ಎಂದೂ ತಿಳಿಸಿದರು.

ಕೆ.ಎಂ ಉಡುಪ ಮಾತನಾಡಿ, ಗ್ರಾಹಕರಿಗೆ ಸಕಾಲದಲ್ಲಿ ಮಾರಾಟದ ನಂತರ ಸೇವೆ ನೀಡುವುದೂ ಪ್ರಮುಖ ಅಂಶ. ಬಡವರಿಗೆ ಸೌರ ಬೆಳಕು, ಶಿಕ್ಷಣಕ್ಕೆ ಸೌರ ಬೆಳಕು ಮೊದಲಾದ ವಿನೂತನ ಹಾಗೂ ಮಹತ್ವದ ಯೋಜನೆಗಳನ್ನು ಲೋಕಕ್ಕೆ ನೀಡಿದ ಸೆಲ್ಕೋ ಸಂಸ್ಥೆಯ ಕಾರ್ಯವನ್ನು ಅವರು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಮ್ಯಾಮ್ಕೋಸ್ ಉಪಾಧ್ಯಕ್ಷ ನರಸಿಂಹ ನಾಯಕ, ಸೆಲ್ಕೋದ ಸಹಾಯಕ ವ್ಯವಸ್ಥಾಪಕ ವಿನಾಯಕ ಹೆಗಡೆ, ಡಾ.ಪಿ. ನಾರಾಯಣ, ಶಂಕರ್ ಶರ್ಮಾ ಮೊದಲಾದವರು ಉಪಸ್ಥಿತರಿದ್ದರು.